ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.
ಸಿ.ಸಿ. ಸಂಖ್ಯೆ.**28/2022**

| | | |
|---|---|---|
| ಸಾಕ್ಷಿದಾರರ ಹೆಸರು | ಶಿಶಿರ್ | ಸಿ.ಡಬ್ಲ್ಯೂ 3 ಪಿ.ಡಬ್ಲ್ಯೂ 4 |
| ತಂದೆಯ ಹೆಸರು | ಶ್ರೀಕಂಠೇಗೌಡ | |
| ವಯಸ್ಸು | 36 ವರ್ಷ | |
| ಉದ್ಯೋಗ | ಕೃಷಿ | |
| ವಾಸಸ್ಥಳ | ಬಸ್ಕಿ | |

ದಿನಾಂಕ: 20.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪ್ರಭಾರ **ಸ.ಸ.ಅ.** ರವರಿಂದ (ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ **299** ರಡಿಯಲ್ಲಿ ಸಾಕ್ಷಿ ವಿಚಾರಣೆ )

1. ಲಕ್ಷ್ಮಣ್ ಮತ್ತು ರೋಶನ್ ಎಂಬ ಆರೋಪಿಗಳು ಮತ್ತು ಬಸವರಾಜ್ ಮತ್ತು ಮೋಹನ್ ಎಂಬ ಆರೋಪಿಗಳು ನನಗೆ ಗೊತ್ತು. ಬಸವರಾಜ್, ಲಕ್ಷ್ಮಣ್ ಮತ್ತು ರೋಶನ್ ರವರು ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಮೋಹನ್ ರವರು ಆಟೋ ಇಟ್ಟುಕೊಂಡಿದ್ದರು, ಅವರು ನಮ್ಮ ಊರಿನವರು ಆಗಿದ್ದರು. ಚಾಸಾ-1 ರವರು ನನ್ನ ತಂದೆ ಆಗಿರುತ್ತಾರೆ. ಚಾಸಾ.2 ರವರು ನನ್ನ ತಾಯಿ ಆಗಿರುತ್ತಾರೆ. ಚಾಸಾ-4 ರಿಂದ 9 ರವರು ನನಗೆ ಪರಿಚಯ ಇರುತ್ತಾರೆ. ದಿನಾಂಕ 24.08.2015 ರಂದು ನಮ್ಮ ಮನೆಯ ಗೋಡಾನ್ ನಲ್ಲಿ ಕಾಳುಮೆಣಸು ಕಳ್ಳತನ ಆಗಿರುತ್ತದೆ. ದಿನಾಂಕ 26.08.2015 ರಂದು ನನ್ನ ತಂದೆಯು ಗೋಡಾನ್ ಬಳಿ ನೋಡಿದಾಗ ಕಾಳು ಮೆಣಸು ಚೆಲ್ಲಿಇರುವುದು ಕಂಡು ಬಂದಿರುತ್ತದೆ. ನಂತರ ಪರಿಶೀಲನೆ ಮಾಡಿ ನೋಡಿದಾಗ ಗೋಡಾನಿನ ಬೀಗ ಹೊಡೆದಿರುವುದು ಕಂಡು ಬಂದಿರುತ್ತದೆ. ಗೋಡಾನಿನ ಮೇಲ್ಛಾವಣಿಯನ್ನು ಹೊಡೆದು ಹಾಕಿರುವುದು ಕಂಡು ಬಂದಿರುತ್ತದೆ. ಗೋಡಾನಿನ ಒಳಗಡೆಯಿಂದ ಹಿಂಬಾಗಿಲನ್ನು ತೆರೆದಿರುವುದು ಕಂಡು ಬಂದಿರುತ್ತದೆ. ನಂತರ ಪರಿಶೀಲಿಸಿದಾಗ 1 ರಿಂದ 3 ನೇ ಆರೋಪಿ ಗಳು ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿರುವವರು ಕಾಣೆಯಾಗಿರುತ್ತಾರೆ.

2. ಸದರಿ ಗೋಡಾನಿನಲ್ಲಿ ಇದ್ದ ಒಟ್ಟು 50 ಕೆ.ಜಿ. ಯ 50 ಚೀಲ ಕಾಳು ಮೆಣಸಿನಲ್ಲಿ 1 ಚೀಲ ಕಾಳು ಮೆಣಸು ಕದ್ದು ಹೋಗಿರುತ್ತದೆ. ಈ ಬಗ್ಗೆ ಬಣಕಲ್ ಠಾಣೆಗೆ ನನ್ನ ತಂದೆಯು ದೂರು ನೀಡಿರುತ್ತಾರೆ. ನಂತರ ಪೊಲೀಸರು 4 ಜನ ಆರೋಪಿ ಗಳನ್ನು ದಿನಾಂಕ 28.08.2015 ರಂದು ಬಂಧಿಸಿರುತ್ತಾರೆ. ನಂತರ ಮಹಜರು ಮಾಡಿರುತ್ತಾರೆ. ಚಾಸಾ-4 ರವರ ಅಂಗಡಿಯಲ್ಲಿ ಆರೋಪಿ ಗಳು ಸದರಿ ಕಾಳು ಮೆಣಸನ್ನು ಮಾರಾಟ ಮಾಡಿದ್ದು ಸದರಿ ಕಾಳು ಮೆಣಸನ್ನು ಪೊಲೀಸರು ಚಾಸಾ.4 ರವರ ಅಂಗಡಿಯಿಂದ ಮಹಜರು ಮುಖೇನ ಅಮಾನತು ಪಡಿಸಿಕೊಂಡಿರುತ್ತಾರೆ. 1 ರಿಂದ 3 ನೇ ಆರೋಪಿಗಳು ನಮ್ಮ ಗೋಡನಿಂದ ಕಾಳು ಮೆಣಸನ್ನು ಹೊತ್ತುಕೊಂಡು ಹೋಗಿ 4 ನೇ ಆರೋಪಿ ಯ ಮನೆಯಿಂದ ಅಟೋ ರಿಕ್ಷಾ ದಲ್ಲಿ ಕಾಳು ಮೆಣಸನ್ನು ಸಾಗಾಟ ಮಾಡಿರುತ್ತಾರೆ. ಆರೋಪಿ ಗಳು ಕಾಳು ಮೆಣಸು ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೊಂಡಿದ್ದು 4 ನೇ ಆರೋಪಿ ಗೆ ರೂ.1500-00 ರೂಪಾಯಿ ಬಾಡಿಗೆ ನೀಡಿರುತ್ತಾರೆ. 1 ನೇ ಆರೋಪಿ ಗೆ ರೂ.10,500-00 ರೂಪಾಯಿ, 2 ನೇ ಆರೋಪಿ ಗೆ ರೂ.4,000-00 ರೂಪಾಯಿ ಮತ್ತು 3 ನೇ ಆರೋಪಿ ಗೆ ರೂ.6,000-00 ರೂಪಾಯಿಯಂತೆ ಹಂಚಿಕೊಂಡಿರುತ್ತಾರೆ. ಆರೋಪಿ ಗಳು ಕಾಳುಮೆಣಸನ್ನು ರೂ.23,000-00 ರಾಪಾಯಿಗೆ ಚಾಸಾ-4 ರವರಿಗೆ ಮಾರಾಟ ಮಾಡಿರುತ್ತಾರೆ. ಆರೋಪಿಗಳನ್ನು ಪುನಃ ನೋಡಿದರೆ ನಾನು ಗುರುತಿಸಿರುತ್ತೇನೆ. ಕಳ್ಳತನ ಆಗಿರುವ ಮುದ್ದೆ ಮಾಲು ಕಾಳುಮೆಣಸನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ